ಆದಷ್ಟು ಬೇಗ ಎಂದರೆ, ಎಷ್ಟು ಸಮಯದಲ್ಲಿ ಮಾಡುತ್ತಾರೆ ಎಂದು ಒಂದು ಹೇಳಿಕೆಯನ್ನು ಕೊಟ್ಟರೆ ಸಂತೋಷವಾಗುತ್ತದೆ.

ಶ್ರೀ ಶರಣಬಸಪ್ಪ ದರ್ಶನಾಪುರ : ಇದನ್ನು ಬಜೆಟ್‌ನಲ್ಲಿ ಸೇರಿಸಿಕೊಂಡಿದ್ದೇವೆ. ಆದಷ್ಟು ತೀವ್ರಗತಿಯಲ್ಲಿ ಈ ಕಾರ್ಯವನ್ನು ಮಾಡುತ್ತೇವೆ.

SRI. I.M. JAYARAMA SHETTY : I am thankful to the Hon.Minister.

ಹೊನ್ನಾವರ ತಾಲ್ಲೂಕಿನ ಮಂಕಿ ಏತ ನೀರಾವರಿ ಯೋಜನೆ.

397 - ಶ್ರೀ ಶಿವಾನಂದ ನಾಯ್ಕ (ಭಟ್ಕಳ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾವರ ತಾಲ್ಲೂಕಿನ ಮಂಕಿಯ ಏತ ನೀರಾವರಿ ಯೋಜನೆ ಸರ್ವೆ ಮಾಡಿ 15 ವರ್ಷ ಕಳೆದರೂ ಕಾರ್ಯಗತವಾಗಿಲ್ಲದಿರುವುದು ನಿಜವೇ?

ಆ) ಈ ವರ್ಷವು ಟೋಕನ್ ಗ್ರ್ಯಾಂಟ್ ಮಾತ್ರ ನೀಡಿರುವುದು ನಿಜವೇ, ಅನುದಾನದ 3:1 ಭಾಗವನ್ನು ಮಂಜೂರು ಮಾಡಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಈ ಏತ ನೀರಾವರಿ ಯೋಜನೆಯ ಸರ್ವೆ ಕಾರ್ಯವನ್ನು 10 ವರ್ಷಗಳ ಹಿಂದೆ ಸ್ಥಾಪಿತಗೊಂಡ ಕೃಷ್ಣಾ ಜಲಾಯನ ಏತ ನೀರಾವರಿ ನಿಗಮದಿಂದ ಕೈಗೊಳ್ಳಲಾಗಿತ್ತು. ಹಾಗೂ ಯೋಜನೆಯು ಫಲಕಾರಿಯಲ್ಲವೆಂದು ಕಂಡು ಬಂದಿದ್ದರಿಂದ ಕೈಬಿಡಲಾಗಿತ್ತು. 1996-97ರಲ್ಲಿ ಸಣ್ಣ ನೀರಾವರಿ ವಲಯದಿಂದ ಪುನಃ ಸರ್ವೆ ಮಾಡಲಾಗಿದ್ದು, ಈ ಯೋಜನೆಯ ಅಂದಾಜು ವೆಚ್ಚ ಸುಮಾರು 222.00 ಲಕ್ಷ ಆಗಿರುತ್ತದೆ.

ಆ) ಹೌದು, ಯೋಜನೆ ಫಲಪ್ರದವೆಂದು ಕಂಡುಬಂದಲ್ಲಿ, ಅನುದಾನ ಒದಗಿಸುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಶಿವಾನಂದ ನಾಯ್ಕ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ, ಮಾನ್ಯ ಸಚಿವರಿಗೆ ಇದರ ಬಗ್ಗೆ ಸೂಕ್ತವಾದ ಮಾಹಿತಿ ಸಿಗಲಿಲ್ಲ ಎನ್ನಿಸುತ್ತದೆ. ಈ ಹಿಂದೆ ಬಜೆಟ್ ಪೂರ್ವದಲ್ಲಿ ಮಾನ್ಯ ಸಚಿವರಿಗೆ ಈ ಮಂಕಿ ಏತ ನೀರಾವರಿ ಯೋಜನೆಯಿಂದ ಏನೇನು ಲಾಭಗಳು ಇವೆ, ಇದರಿಂದ ಎಷ್ಟು ಜನ ರೈತರಿಗೆ ಅದರಿಂದ ಲಾಭವಾಗುತ್ತದೆ ಎನ್ನುವಂತಹ ವಿಷಯವನ್ನು ಅವರ ಗಮನಕ್ಕೆ ತಂದಿದ್ದೇನೆ. ಆದರೂ ಈ ಸಂದರ್ಭದಲ್ಲಿ ಪುನಃ ಅವರ ಗಮನಕ್ಕೆ ತರಲು ಇಚ್ಛಿಪಡುತ್ತೇನೆ. ಮಂಕಿ ಏತನೀರಾವರಿ ಯೋಜನೆಯಿಂದ ಸಾಮಾನ್ಯವಾಗಿ 900 ಎಕರೆಗೆ 3 ಬೆಳೆ ಬೆಳೆಯಲು ಅನುಕೂಲವಾಗುತ್ತದೆ. ಅಷ್ಟೇ ಅಲ್ಲ ಸುಮಾರು 400 ಕುಟುಂಬಗಳಿಗೆ

ಪಕೂಲವಾಗುಂವಂತಹ ಯೋಜನೆ ಇದು. ಇದು 15 ವರ್ಷಗಳ ಹಿಂದೆ ಸರ್ವೆಯಾಗಿ 96-97 ರಲ್ಲಿ ಟೋಕನ್ ಗ್ರಾಂಟ್ ಬಂದಿತ್ತು. ಈಗ 1997-98ರ ಬಜೆಟ್ ಪೂರ್ವದಲ್ಲಿ ಸನ್ಮಾನ್ಯ ಂತ್ರಿಗಳ ಹತ್ತಿರ ನಾನು ಇದರ ಬಗ್ಗೆ ವಿವರಣೆಯನ್ನು ಹೇಳಿದ್ದೇನೆ. ಆಷ್ಟೇ ಅಲ್ಲ ಮಾನ್ಯ ಮಂತ್ರಿಗಳು ಕ್ಷೇತ್ರಕ್ಕೆ ಪ್ರವಾಸ ಬಂದಾಗ ಈ ಬರಡಾದ ಭೂಮಿಯನ್ನು ತೋರಿಸಿದ್ದೇನೆ. ಆವರು ಅದನ್ನು ಮ್ಮ ಕಣ್ಣಾರೆ ನೋಡಿ ಬಂದು ಪುನಃ ಅದರ ಬಗ್ಗೆ ಸರಿಯಾದ ಉತ್ತರವನ್ನು ಕೊಡುತ್ತಾ ಇಲ್ಲ. ಮಾನ್ಯವಾಗಿ ನಮ್ಮ ಬಯಲು ಸೀಮೆ ಪ್ರದೇಶದ ಹಾಗೆ 25 ಎಕರೆ 50 ಎಕರೆ ಜಮೀನು ಇರುವಂಥ ರು ನಮ್ಮ ಕಡೆ ಇಲ್ಲ. ಕೇವಲ 1 ರಿಂದ 5 ಎಕರೆವರೆಗೆ ಮಾತ್ರ ಜಮೀನು ಹೊಂದಿರುತ್ತಾರೆ. ಇಲ್ಲಿ ಎಕರೆ ಹೊಂದಿರುವಂಥ ರೈತರೇ ಅತಿ ದೊಡ್ಡ ರೈತನಾಗಿರುತ್ತಾನೆ. ಈಗ ಅಲ್ಲಿರುವಂಥ 900 ಎಕರೆ ರೀತಿ ಬರಡು ಭೂಮಿಯಾಗಿರುವುದರಿಂದ ನಮ್ಮ ರೈತರಿಗೆ ತುಂಬಾ ಹಾನಿಯಾಗುತ್ತಿದೆ. ಆದುದರಿಂದ ಯೋಜನೆಯನ್ನು 1997-98ನೇ ಸಾಲಿನಲ್ಲಿ ಕೈಗೊಂಡು ಪೂರ್ಣ ಗೊಳಿಸಿಕೊಡಬೇಕೆಂದು ಮಾನ್ಯ ಂತ್ರಿಯವರನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ತಿಪ್ಪೇಸ್ವಾಮಿ : ಮಾನ್ಯ ಉಪಾಧ್ಯಕ್ಷರೇ, ಈ ಬಗ್ಗೆ ಹಿಂದೆ ಒಂದು ಬಾರಿ ಇದು ಪಯುಕ್ತವಲ್ಲವೆಂಬ ತಜ್ಞರ ಅಭಿಪ್ರಾಯದ ಪ್ರಕಾರ ಇದನ್ನು ಕೈಬಿಡಲಾಗಿತ್ತು. ಇದನ್ನು ಮತ್ತೆ ವು 1996-97ನೇ ಸಾಲಿನಲ್ಲಿ ಇದರ ಬಗ್ಗೆ ಸಣ್ಣ ನೀರಾವರಿ ಇಲಾಖೆ ಮುಖೇನ ಅಂದಾಜು ಾಡಿಸಲಾಗಿದ್ದು 222 ಲಕ್ಷ ರೂ.ಗಳು ಖರ್ಚಾಗುತ್ತದೆ ಎನ್ನುವ ಅಂದಾಜು ಬಂದಿದೆ. ಇವೊತ್ತು ನು ಸನ್ಮಾನ್ಯ ಸದಸ್ಯರ ಭಾವನೆಯನ್ನು ಅರ್ಥಮಾಡಿಕೊಳ್ಳಬಲ್ಲೆ, ಇದು ಆರ್ಥಿಕವಾಗಿ ಮತ್ತು ಂತ್ರಿಕವಾಗಿ ಉಪಯುಕ್ತವಾಗುತ್ತದೆ ಎನ್ನುವ ವಿಚಾರ ತಿಳಿದುಬಂದ ತಕ್ಷಣ ಸನ್ಮಾನ್ಯ ಸದಸ್ಯರ ಸವನ್ನು ನಾನು ಪರಿಪೂರ್ಣ ಮಾಡಿಕೊಡುವ ವಿಚಾರದಲ್ಲಿ ನಾನು ಹಿಂದೆಬೀಳುವುದಿಲ್ಲ. ನನ್ನ ಲದಲ್ಲಿ ಸಣ್ಣ ನೀರಾವರಿ ಬಗ್ಗೆ ಎಷ್ಟು ಒತ್ತು ಕೊಡಬೇಕೋ ಅದಕ್ಕಿಂತ ಹೆಚ್ಚಿನ ಒತ್ತನ್ನು ಕೊಟ್ಟು ಆ ರನ್ನು ಬಳಸುವುದರಲ್ಲಿ ನಾನು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇನೆಂದು ತಮ್ಮ ಮೂಲಕ ದಸ್ಯರಿಗೆ ತಿಳಿಸಬಯಸುತ್ತೇನೆ.

ಳ್ಳೀದಗುಡ್ಡ ಕ್ಷೇತ್ರದ ಶಿರೂರ ಹಾಗೂ ಕಮತಗಿ ಗ್ರಾಮದಲ್ಲಿ 33 ಕೆ.ವ್ಯಾ. ವಿದ್ಯುಚ್ಛಕ್ತಿ ್ರೇಷನ್ ಪ್ರಾರಂಭ.

398 - ಶ್ರೀ ರಾಜಶೇಖರ ಶೀಲವಂತ (ಗುಳ್ಳೀದಗುಡ್ಡ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಳ್ಳೀದಗುಡ್ಡ ಮತ ಕ್ಷೇತ್ರದ ಶಿರೂರ ಹಾಗೂ ಕಮತಗಿ ಗ್ರಾಮಗಳಲ್ಲಿ 33 ಕೆವಿ ಸಬ್-ಸ್ಟೇಷನ್ ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ ಇಲ್ಲಿಯವರೆಗೆ ಏನೇನು ಕ್ರಮ ಕೈಗೊಳ್ಳಲಾಗಿದೆ?

ಇ) ಸದರಿ ಕೆಲಸಗಳನ್ನು ಯಾವಾಗ ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗುವುದು?